# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ.ಬಿ12(1)ಪಿಆರ್/225/18–19/2021–22

ಮುಖ್ಯ ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 19/6/21

**ಆಂತರಿಕ ಕಛೇರಿ ಟಿಪ್ಪಣಿ**

ವಿಷಯ: ಕಂದಾಯ ವಸೂಲಿಗಾರರು ಸೇವಾ ಜೇಷ್ಠತಾ ಪಟ್ಟಿಯನ್ನು ಪ್ರಚುರಪಡಿಸಿರುವ ಬಗ್ಗೆ.

ಉಲ್ಲೇಖ: 1) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ; 40331/2018, ದಿನಾಂಕ: 31-03-2021

2) ಈ ಕಛೇರಿ ಸಮಸಂಖ್ಯೆಯ ಕಛೇರಿ ಆದೇಶ ದಿನಾಂಕ: 15-06-2021

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ; 40331/2018, ದಿನಾಂಕ: 31–03–2021ರ ಆದೇಶದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಂದಾಯ ವಸೂಲಿಗಾರರರ ವೃಂದದ ಅರ್ಹತಾ ದಿನಾಂಕ; 01-01-2015ಕ್ಕೆ ಇರುವಂತೆ, ದಿನಾಂಕ: 09–11–2015ರಂದು ಅಂತಿಮಗೊಳಿಸಿರುವ ಹಾಗೂ ಅರ್ಹತಾ ದಿನಾಂಕ: 01–06–2017ಕ್ಕೆ ಇರುವಂತೆ ದಿನಾಂಕ: 08–01–2018ರಂದು ಅಂತಿಮಗೊಳಿಸಿರುವ ಜೇಷ್ಠತಾ ಪಟ್ಟಿಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಆದೇಶ ಹೊರಡಿಸಿದ 15 ದಿವಸಗಳೊಳಗಾಗಿ ಆಕ್ಷೇಪಣೆಗಳೊಂದಿಗೆ ಪೂರಕ ದಾಖಲಾತಿಗಳನ್ನು ಲಿಖಿತವಾಗಿ ಸಲ್ಲಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಬಾವಿಸಿ ಸದರಿ 2021ಕ್ಕೆ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗುವುದೆಂದು ಉಲ್ಲೇಖ–(2)ರಂತೆ ಪ್ರಚುರಪಡಿಸಲಾಗಿರುತ್ತದೆ. ಸದರಿ ಕಂದಾಯ ವಸೂಲಿಗಾರರ ಸೇವಾ ಜೇಷ್ಠತಾ ಪಟ್ಟಿಗಳು ಬಿಬಿಎಂಪಿ ವೈಬ್‌ಸೈಟ್‌ನಲ್ಲಿ ಅಳವಡಿಸಿದ್ದು, ಸದರಿ ಆಕ್ಷೇಪಣೆಗಳನ್ನು ಡೋನ್‌ಲೋಡ್ ಮಾಡಿ ಕಛೇರಿಯ ನಾಮಫಲಕದಲ್ಲಿ ಅಳವಡಿಸಿ ಕಂದಾಯ ವಸೂಲಿಗಾರರಿಗೆ ಪ್ರಚುರಪಡಿಸಿ ಈ ಕಛೇರಿಗೆ ವರದಿ ನೀಡಲು ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಚಿಸಲು ಈ ಆಂತರಿಕ ಕಛೇರಿ ಟಿಪ್ಪಣಿ ಮೂಲಕ ಸೂಚಿಸಿದೆ.

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

19/6/2021 19/6/2021 19/6/2021

ಗೆ,

1) **ಜಂಟಿ ಆಯುಕ್ತರು (ಪಶ್ಚಿಮ)/(ಪೂರ್ವ)/(ದಕ್ಷಿಣ)**
2) **ಜಂಟಿ ಆಯುಕ್ತರು (ರಾ.ರಾ.ನಗರ)/(ಬೊಮ್ಮನಹಳ್ಳಿ)/(ದಾಸರಹಳ್ಳಿ)/(ಯಲಹಂಕ)/(ಮಹದೇವಪುರ)**
   **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1)ಪಿಆರ್/261/17–18/2021–22

ಮುಖ್ಯ ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು
ಬೆಂಗಳೂರು, ದಿನಾಂಕ: 15·6·2021

**ಕಛೇರಿ ಆದೇಶ**

ವಿಷಯ: ಅರ್ಹತಾ ದಿನಾಂಕ; 01–01–2015ಕ್ಕೆ ಇರುವಂತೆ, ದಿನಾಂಕ: 09–11–2015ರಂದು ಅಂತಿಮಗೊಳಿಸಿರುವ ಹಾಗೂ ಅರ್ಹತಾ ದಿನಾಂಕ: 01–06–2017ಕ್ಕೆ ಇರುವಂತೆ ದಿನಾಂಕ: 08–01–2018ರಂದು ಅಂತಿಮಗೊಳಿಸಿರುವ ಕಂದಾಯ ವಸೂಲಿಗಾರರ ವೃಂದದಸೇವಾ ಜೇಷ್ಠತಾ ಪಟ್ಟಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ: 40331/2018, ದಿನಾಂಕ: 31–03–2021ರ ಆದೇಶದಂತೆ ತಾತ್ಕಾಲಿಕ ಪಟ್ಟಿಯೆಂದು ಪರಿಗಣಿಸಿ ಪ್ರಚುರಪಡಿಸುವ ಬಗ್ಗೆ.

ಉಲ್ಲೇಖ: 1) ದಿನಾಂಕ: 01–01–2015ಕ್ಕೆ ಇರುವಂತೆ, ದಿನಾಂಕ: 09–11–2015ರಂದು ಪ್ರಚುರ ಪಡಿಸಲಾಗಿರುವ ಅಂತಿಮ ಕಂದಾಯ ವಸೂಲಿಗಾರರ ಪಟ್ಟಿ.

2) ದಿನಾಂಕ: 01–06–2017ಕ್ಕೆ ಇರುವಂತೆ, ದಿನಾಂಕ:08–01–2018ರಂದು ಪ್ರಚುರ ಪಡಿಸಲಾಗಿರುವ ಅಂತಿಮ ಕಂದಾಯ ವಸೂಲಿಗಾರರ ಪಟ್ಟಿ.

3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ: 40331/2018, ದಿನಾಂಕ: 31–03–2021

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಂದಾಯ ವಸೂಲಿಗಾರರರ ವೃಂದದ ಅರ್ಹತಾ ದಿನಾಂಕ; 01–01–2015ಕ್ಕೆ ಇರುವಂತೆ, ದಿನಾಂಕ: 09–11–2015ರಂದು ಅಂತಿಮಗೊಳಿಸಿರುವ ಹಾಗೂ ಅರ್ಹತಾ ದಿನಾಂಕ: 01–06–2017ಕ್ಕೆ ಇರುವಂತೆ ದಿನಾಂಕ: 08–01–2018ರಂದು ಅಂತಿಮಗೊಳಿಸಿರುವ ಕಂದಾಯ ವಸೂಲಿಗಾರರ ವೃಂದದ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯವು ಉಲ್ಲೇಖ–(3)ರಂತೆ ಕಂದಾಯ ವಸೂಲಿಗಾರರ ವೃಂದದ ಅರ್ಹತಾ ದಿನಾಂಕ; 01–01–2015ಕ್ಕೆ ಇರುವಂತೆ, ದಿನಾಂಕ: 09–11–2015ರಂದು ಅಂತಿಮಗೊಳಿಸಿರುವ ಹಾಗೂ ಅರ್ಹತಾ ದಿನಾಂಕ: 01–06–2017ಕ್ಕೆ ಇರುವಂತೆ ದಿನಾಂಕ: 08–01–2018ರಂದು ಅಂತಿಮಗೊಳಿಸಿರುವ ಕಂದಾಯ ವಸೂಲಿಗಾರರ ವೃಂದದ ಸೇವಾ ಜೇಷ್ಠತಾ ಪಟ್ಟಿಯನ್ನು ತಾತ್ಕಾಲಿಕ ಪಟ್ಟಿಯೆಂದು ಪರಿಗಣಿಸಿ ಪ್ರಚುರಪಡಿಸಲು ಆದೇಶಿಸಲಾಗಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಂದಾಯ ವಸೂಲಿಗಾರರರ ವೃಂದದ ಅರ್ಹತಾ ದಿನಾಂಕ; 01–01–2015ಕ್ಕೆ ಇರುವಂತೆ, ದಿನಾಂಕ: 09–11–2015ರಂದು ಅಂತಿಮಗೊಳಿಸಿರುವ ಹಾಗೂ ಅರ್ಹತಾ ದಿನಾಂಕ: 01–06–2017ಕ್ಕೆ ಇರುವಂತೆ ದಿನಾಂಕ: 08–01–2018ರಂದು ಅಂತಿಮಗೊಳಿಸಿರುವ ಜೇಷ್ಠತಾ ಪಟ್ಟಿಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಆದೇಶ ಹೊರಡಿಸಿದ 15 ದಿವಸಗಳೊಳಗಾಗಿ ಆಕ್ಷೇಪಣೆಗಳೊಂದಿಗೆ ಪೂರಕ ದಾಖಲಾತಿಗಳನ್ನು ಲಿಖಿತವಾಗಿ ಸಲ್ಲಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಬಾವಿಸಿ ಸದರಿ 2021ಕ್ಕೆ ಸೇವಾ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು. (01–01–2015 ಮತ್ತು 01–06–2017ರ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಲಗತ್ತಿಸಿದೆ)

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಆಡಳಿತ) / (ಕಂದಾಯ) ರವರಿಗೆ ಕಳುಹಿಸಿದೆ.
: ಜಂಟಿ / ಉಪ ಆಯುಕ್ತರು (ಕಂದಾಯ) ರವರಿಗೆ ಕಳುಹಿಸಿದೆ.
: ಎಲ್ಲಾ ವಲಯ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಕಛೇರಿ ಪ್ರತಿ.